**DS – 1187**

# III ಸೆಮಿಸ್ಟರ್ ಬಿ.ಎಸ್ಸಿ/ಬಿ.ಸಿ.ಎ. ಪರೀಕ್ಷೆ, ನವೆಂಬರ್/ಡಿಸೆಂಬರ್ 2009
## (ಸೆಮಿಸ್ಟರ್ ಸ್ಕೀಮ್-ಫ್ರೆಶರ್ಸ್)
## ಕನ್ನಡ ಭಾಷೆ – III
## ಭಾಷಾ ಪತ್ರಿಕೆ – ೩, ಭಾಗ – ೧, ಭಾಷೆ-೧-ಸಾಹಿತ್ಯ ಸಂವಾದ -೨

Time : 3 Hours Max. Marks : 90

### ಭಾಗ – 1

1. ಅರ್ಥ ಮತ್ತು ಧ್ವನಿ ಬದಲಾಗದಂತೆ **ಮೂರು** ವಾಕ್ಯಗಳಿಗೆ ಬದಲಿ ವಾಕ್ಯ ರಚಿಸಿ : **(3×2=6)**
   1) ಕಿವಿಯಲಿ ಯಾರೇನನು ಪಿಸು ನುಡಿದರು ಹೇಳು.
   2) ಎಂದಿನಂತೆ ಅದನ್ನು ಮಾಸಲು ವರ್ಣದ ಚೀಲದೊಳಗೆ ಸೇರಿಸಿದನು.
   3) ಸಿಕ್ಕಲಿಲ್ಲವೇ ಗುರುತು ಎಂದು ನಕ್ಕ.
   4) ಅಮೃತನಕ್ಕುಮ್ ನಿನ್ನೀ ಚಿರಂಜೀವಿ !

2. ಅರ್ಥವತ್ತಾದ ಕ್ರಮದಲ್ಲಿ **ಮೂರು** ವಾಕ್ಯಗಳನ್ನು ಪುನಾರಚಿಸಿ : **(3×2=6)**
   1) ಕೊಲೆ ಮಾಡು ಹಿಂಸೆಯಾಗದಂತೆ ಎಂದು ಪಿಸುನುಡಿದ ಕಿಂಚಿತ್ತೂ.
   2) ಹೊತ್ತು ಸದಾ ಮೆರೆಯುವವರು ಹೆಗಲಲ್ಲಿ,
   3) ಕಲಶಮಣಿ ಕುಲಗೋಪುರದ ಕೆಡೆದಿರ್ಪುದೆನ್ನ,
   4) ಮಾಡ್ತಾರೇನ್ರೋಬೆನ್ನು ಉಳುಕಿಗೆಲ್ಲಾ ಔಷಧ ಇಷ್ಟೊಂದು–ಹುಚ್ಚು ಸೂಳೇ ಮಕ್ಕಳಾ ?

3. ಉಪಮೆ ಮತ್ತು ರೂಪಕಗಳನ್ನು ಬಳಸಿ **ಮೂರು** ಸ್ವಂತ ವಾಕ್ಯಗಳನ್ನು ರಚಿಸಿ : **(3×2=6)**
   1) ಹೆಬ್ಬಾವಿನಂತೆ ಬಂದ ರೈಲು
   2) ಕವಿ ಋಷಿ
   3) ನಾಯಪಾಲ್
   4) ಕಟ್ಟೊಡೆದ ನದಿ.

4. **ಮೂರು** ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ : **(3×2=6)**
   1) ಬಾಳಬಟ್ಟೆ
   2) ಅಂಕುರವಿಡು
   3) ವೇದವಾಕ್ಯ
   4) ಕಾಲುಕೀಳು.

P.T.O.

5. ಎರಡು ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ : (2×3=

1) ಪಾಲಿಗೆ ಬಂದದ್ದು ಪಂಚಾಮೃತ

2) ದುಡ್ಡಿದ್ದವನೆ ದೊಡ್ಡಪ್ಪ

3) ತುಂಬಿದ ಕೊಡ ತುಳುಕುವುದಿಲ್ಲ

4) ಬೆಳ್ಳಗಿರುವುದೆಲ್ಲ ಹಾಲಲ್ಲ.

## ಭಾಗ – 2

1. ನಾಲ್ಕು ಪ್ರಶ್ನೆಗಳಿಗೆ ತಾರ್ಕಿಕ ಆಲೋಚನೆಯ ಹಿನ್ನೆಲೆಯಲ್ಲಿ ಉತ್ತರಿಸಿ : (4×5=2

1) 'ಗಾಳಿ' ಯ ಮೂಲಕ ಸಾವನ್ನು ಕಂಡಿರುವ ಬಗೆಯನ್ನು ಬಣ್ಣಿಸಿರಿ.

2) ಬಲರಾಮ ವೆಂಕಪ್ಪನಾಯ್ಡುವಿಗೆ ದೊರೆತ ಬಗೆ ಹಾಗೂ ಆತನನ್ನು ನಾಯ್ಡು ಪಳಗಿಸಿದ ರೀತಿಯನ್ನು ಬಣ್ಣಿಸಿರಿ.

3) ವ್ಯಕ್ತಿ ಜೀವಿಸುತ್ತಲೇ ಕಾಲನ ಕರೆ ಬಂದಾಗ ಅದನ್ನು ಅಂಗೀಕರಿಸುವ ಬಗೆಯನ್ನು 'ಸಾವು' ಕವಿತೆಯ ಮೂಲಕ ಸಾದರಪಡಿಸಿ.

4) ಗುಲಾಮಗಿರಿಯಿಂದ ಹೊರಬಂದಿದ್ದರೂ, ಇಂದಿಗೂ ಗುಲಾಮರಾಗಿಯೇ ಬದುಕುತ್ತಿರುವ ಭಾರತೀಯರ ಬಗ್ಗೆ ಕವಿಯ ಅಭಿಪ್ರಾಯಗಳೇನು ?

5) ಶೂದ್ರನ ತಪಸ್ಸಿನಿಂದ ಧರ್ಮದ ಮೇಲಾದ ಪರಿಣಾಮವನ್ನು ಬ್ರಾಹ್ಮಣನ ಮಾತುಗಳಲ್ಲಿ ವರ್ಣಿಸಿರಿ.

6) ಭೈರಪ್ಪ ಮತ್ತು ಸುಬ್ಬೇಗೌಡರ ಬೆನ್ನಿನ ಉಳುಕು ಹದಗೆಟ್ಟ ಬಗೆಯನ್ನು ಬಣ್ಣಿಸಿರಿ.

## ಭಾಗ – 3

1. ಎರಡು ಪ್ರಶ್ನೆಗಳಿಗೆ ವಿವರಣಾತ್ಮಕ ಉತ್ತರ ಬರೆಯಿರಿ : (2×10=2

1) ಬಲರಾಮನ ಕೊಲೆಯ ಕಲೆಗಾರಿಕೆಯನ್ನು ಕುರಿತು ಬರೆಯಿರಿ.

2) ಉಳುಕು ತೆಗೆಯುವ ಕರಿಯನ ವ್ಯಕ್ತಿತ್ವವನ್ನು ಪರಿಚಯಿಸಿರಿ.

3) ಸ್ವಯಂಕೃತ ಅಪರಾಧದಿಂದ ಕಾಳೇಗೌಡ ಪಟ್ಟ ಬವಣೆಯನ್ನು ಬಣ್ಣಿಸಿರಿ.

## ಭಾಗ – 4

1. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ : (2×10=2

1) ತಡವಾಗಿ ಬಂದ ಅಮೃತಮತಿಯನ್ನು ಅಷ್ಟಾವಂಕನು ನಡೆಸಿಕೊಂಡ ಬಗೆಯನ್ನು ಬಣ್ಣಿಸಿರಿ.

2) ಪ್ರತ್ಯೇಕತೆಯನ್ನು ಕುರಿತ ಮನಃಶಾಸ್ತ್ರಜ್ಞರ ಅಭಿಪ್ರಾಯಗಳನ್ನು ಕ್ರೋಢೀಕರಿಸಿ.

3) ತಪಸ್ಸಿನ ಮಹತ್ವ 'ಶೂದ್ರತಪಸ್ವಿ' ನಾಟಕದ ಭಾಗದಲ್ಲಿ ನಿರೂಪಿತವಾಗಿರುವ ಬಗೆ ಹೇಗೆ ? ವಿಶ್ಲೇಷಿಸಿ.

# III ಸೆಮಿಸ್ಟರ್ ಬಿ.ಎಸ್ಸಿ. ಪರೀಕ್ಷೆ, ನವೆಂಬರ್/ಡಿಸೆಂಬರ್ 2009
## (ರಿಪೀಟರ್ಸ್ ಸ್ಕೀಮ್)
## ಕನ್ನಡ
## ಭಾಷಾ ಪತ್ರಿಕೆ – III
## (ಆಧುನಿಕ ಕನ್ನಡ ಕವಿತೆ ಮತ್ತು ವಿಚಾರಧಾರೆ)

Time : 3 Hours Max. Marks : 90

I. ಅ) ಒಂದರ ಭಾವವನ್ನು ವಿವರಿಸಿ : (1×5=5)

1) ಕಮ್ಮಿ ಎನಿಸಲೇ ಇಲ್ಲ ಯಾವ ನೆಮ್ಮದಿಗು ಉಂಡಷ್ಟು ದಿನ
ಆ ಕೈಯ ಮಮತೆಯ ಅನ್ನ
ಇಂದಿಗೂ ಅದೇ ಕಣ್ಣ ಕಾವಲ ನೆನಪು ಅದೇ ನೀರುಂಡ ಮಣ್ಣ ತಂಪು
ಊಡುತಿದೆ ತಾಯಿ ಬೇರು

2) ಹಂಗಿನರಮನೆಯಿಂದ ಪಾರಿವಾಳವು ಹಾರಿ
ತುಂಬೆ ಹೂವರಳಿ ಫಲಕೊಡಲಿ ನಿಂಬೆ
ಮೂಡಿ ಕಾಮಬಿಲ್ಲು ಜನವೆದ್ದು ಕುಣಿದು
ಹಬ್ಬವಾಗಲಿ ನೀಲಿ ಮುಗಿಲಿನಲ್ಲಿ.

ಆ) ಮೂರನ್ನು ಸಂದರ್ಭ ಸಹಿತ ವಿವರಿಸಿ : (3×3=9)

1) ಸಾವಿಗಾಗಿ ತಪಿಸುವವರು ಬಾಳಬೀಜ ಹಿಡಿವರೇ ?
2) ನಿನ್ನೆದೆಯೆ ದನಿಯೆ ಋಷಿ ! ಮನು ನಿನಗೆ ನೀನು !
3) ಬಂಜೆಯರ ಗರ್ಭ ಗಟ್ಟಿಗೊಳಿಸಿದಾಕೆ
4) ನಾನಾಗ ಮಗುವಾಗುತ್ತೇನೆ ಮುಗ್ಧ ನಗುವಾಗುತ್ತೇನೆ
5) ದುಡಿದುಡಿದು ಸವೆದವರ ಬಯಕೆಯ ಭವನ.

ಇ) ಮೂರನ್ನು ಕುರಿತು ಟಿಪ್ಪಣಿ ಬರೆಯಿರಿ : (3×2=6)

ಜಿ.ಪಿ. ರಾಜರತ್ನಂ, ಪರಬೊಮ್ಮ, ತೋಟದಿನಿಯ ಹಣ್ಣು, ನವ್ಯ ಸಾಹಿತ್ಯ, ರಂಜಾನ್ ದರ್ಗಾ, ಮಂಗೋಲಿಯದ ರಾಜ.

II. ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ : (4×5=20)

1) ಮಹಾರಾಣಿ ದೊರೆಗಳು ಮೆರೆಸಿದ ಮಹಾಚೋದ್ಯ
2) ಕೆರೆಯಲ್ಲಿ ಮುಳುಗುತ್ತಿರುವ ಶಿಶುವನ್ನು ಕಂಡಾಗಿನ ಕವಿಯ ಮನಸ್ಥಿತಿ
3) ರತ್ನನ ಕನ್ನಡಾಭಿಮಾನ
4) ಪಿತೃ-ಪಿತಾಮಹರು ಉರುಳಾಡುತ್ತಿರುವ ಸನ್ನಿವೇಶ
5) ಹಬ್ಬಿರುವ ಮಬ್ಬಿನೊಳಗೊಬ್ಬನೇ ಮುದುಕ
ಕೋಲೂರಿ ನಡೆಯುವ ಸದ್ದು
6) ಕೇರಳದ ಹುಡುಗಿಯರ ಸೊಬಗು.

III. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ : (2×10=20

1) ವಸಾಹತುಶಾಹಿಯ ಆಕ್ರಮಣಕ್ಕೆ ಷರೀಫರು ವ್ಯಕ್ತಪಡಿಸುವ ವಿರೋಧ 'ಗಿರಣಿ ವಿಸ್ತಾರ ನೋಡಮ್ಮ' ಕವಿತೆಯಲ್ಲಿ ಹೇಗೆ ಚಿತ್ರಿತವಾಗಿದೆ ?

2) 'ಸಾವಿಗಿಂತ ಬಾಳು ಮೇಲು ಎಂಬ ಮಾತು ಗೆಲ್ಲಲಿ' ಎಂದು ಬೇಂದ್ರೆಯವರು ಆಶಿಸುವುದೇಕೆ ? ವಿವರಿಸಿ.

3) ಶಾಸ್ತ್ರ-ಸಂಪ್ರದಾಯಗಳಿಂದಾಗಿರುವ ಅನಾಹುತವನ್ನು ಕುವೆಂಪು ಏಕೆ ಪ್ರತಿಭಟಿಸುತ್ತಾರೆ ? ವಿವರಿಸಿ.

4) ಮನುಷ್ಯ ಸಂಬಂಧಗಳೆಲ್ಲ ವಾಣಿಜ್ಯೀಕರಣವಾಗಿರುವ ದುರಂತವನ್ನು ಸಿದ್ಧಲಿಂಗಯ್ಯನವರ ಕವನ ಹೇಗೆ ವ್ಯಕ್ತಪಡಿಸಿದೆ ?

IV. ಐದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ : (5×1=5

1) ಮನುಷ್ಯನ ದುರಂತಕ್ಕೆ ಎಡೆಮಾಡಿಕೊಡುವುದು ಯಾವುದು ?

2) ವ್ಯಕ್ತಿ ಗೌರವದ ಮೊದಲ ಲಕ್ಷಣ ಏನು ?

3) ತಲೆಹೋಗಿ ಮರ ಉಳಿಯುವುದಾದರೆ ಅದೇ ಹೆಚ್ಚು ಲಾಭದಾಯಕ ಎಂದವರು ಯಾರು ?

4) ಸಿದ್ಧಾರ್ಥನ ಸರಳವಾದ ಉಪದೇಶ ಯಾವುದು ?

5) ಸತ್ಯಾನ್ವೇಷಣೆಗೆ ಯಾವುದು ಅಗತ್ಯ ?

6) ನಮ್ಮ ಭವಿಷ್ಯಕ್ಕೆ ಹೊಣೆ ಯಾರು ?

7) ಹುಟ್ಟಿನಿಂದ ಹೆಣ್ಣು 'ಹೆಣ್ಣಾಗುವುದಿಲ್ಲ' ಎಂದರೆ ಹೆಣ್ಣು ಹೇಗಾಗುತ್ತಾಳೆ ?

V. ಒಂದು ವಿಷಯದ ಬಗ್ಗೆ ವಿವರಣಾತ್ಮಕ ಟಿಪ್ಪಣಿ ಬರೆಯಿರಿ : (1×5=5

1) ವೈಜ್ಞಾನಿಕ ಮನೋಭಾವ

2) ಪ್ರಕೃತಿಯ ದುರ್ಬಳಕೆ.

VI. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ : (2×10=20

1) ಮೋಕ್ಷ ಹುಡುಕಲು ಹೊರಟ ಬುದ್ಧನು ಪ್ರೀತಿಯ ಬಂಧನದಲ್ಲಿ ಸಿಕ್ಕಿಕೊಂಡದ್ದನ್ನು ಲೇಖಕರು ಹೇಗೆ ನಿರೂಪಿಸಿದ್ದಾರೆ ?

2) ಪ್ರಾರ್ಥನೆ-ಪೂಜೆಗಳು ಸಮಾಜದಲ್ಲಿ ಮೂಢನಂಬಿಕೆ ಮತ್ತು ಭಯವನ್ನು ಮೂಡಿಸುತ್ತವೆ ಎಂಬ ಲೇಖಕರ ಮಾತನ್ನು ವಿಮರ್ಶಿಸಿ.

3) 'ಪ್ರತಿ ವ್ಯಕ್ತಿಯೂ ದ್ವಿಲಿಂಗಿ' ಎಂಬ ವಿಚಾರಧಾರೆ 'ಮಹಿಳೆ ಮತ್ತು ವಿಜ್ಞಾನ' ಎಂಬ ಲೇಖನದಲ್ಲಿ ಹೇಗೆ ಅಭಿವ್ಯಕ್ತಗೊಂಡಿದೆ ?

4) ಶಿಕ್ಷಣದ ವೈಫಲ್ಯವೇ ಪರಿಸರ ನಾಶಕ್ಕೆ ಕಾರಣ ಎಂಬುದನ್ನು 'ಪರಿಸರ ಮತ್ತು ವಿಕಾಸ' ಲೇಖನದಲ್ಲಿ ಹೇಗೆ ವಿವರಿಸಲಾಗಿದೆ ?

---